# ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಚಿತ್ತಾಪೂರ

**ಎಮ್.ವಿ.ಸಿ. ನಂಃ 1452/2024**
**ಪಿ.ಡಬ್ಲ್ಯೂಃ1, ಮೈಲಾರಿ**

**ದಿನಾಂಕ : 30-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು :- ಶ್ರೀ ಎಸ್. ಎಸ್. ಎ. ಎದುರುದಾರ ಪರ ವಕೀಲರಿಂದ :**

ನಾನು ಶಾಲೆ ಕಲಿತಿಲ್ಲಾ. ನಾನು ಸಹಿ ಮಾಡುತ್ತೇನೆ. ನನ್ನ ಜನ್ಮ ದಿನಾಂಕ ನೆನೆಪಿಲ್ಲಾ. ನಾನು ಮತದಾನ ಮಾಡುತ್ತೇನೆ, ಮತದಾನ ಚೀಟಿ ಸಲ್ಲಿಸಿಲ್ಲಾ. ಅಪಘಾತ ಆದಾಗ ನನ್ನ ವಯಸ್ಸು 42 ಇತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಅಪಘಾತಕ್ಕಿಂತ ಮುಂಚೆ ಕೂಲಿ ಮಾಡಿ ತಿಂಗಳಿಗೆ ರೂ. 25,000/- ಸಂಪಾದಿಸುತ್ತಿದ್ದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

ನಾನು ಜೇವರ್ಗಿಗೆ ಬೈಕ ಮೇಲೆ ಹೊರಟಿದ್ದೆ. ಬೈಕನ್ನು ನಾನೇ ಚಲಾಯಿಸುತ್ತಿದ್ದೆ, ಚಾಲನಾ ಪತ್ರ ಇದೆ ಅದು ಕಳೆದು ಹೋಗಿದೆ. ಸದರಿ ಬೈಕ ನನ್ನದು, ನಾನು ಬೈಕ ತೆಗೆದು ಮುಂದೆ ಹೊರಟಿದ್ದೆ, ನನ್ನ ತಮ್ಮ ಪ್ರಭುರಾವ ಹಿಂದೆ ಹೊರಟಿದ್ದ, ನಾನು ಬೈಕ ತೆಗೆದುಕೊಂಡು ಮುಂಚೆ ಹೊರಟಾಗ, ಪ್ರಭುರಾವ ಇತನ ಬೈಕಗೆ ನಾಯಿ ಅಡ್ಡ ಬಂದ ಕಾರಣ ಅದನ್ನು ತಪ್ಪಿಸಲು ನನ್ನ ಬೈಕಗೆ ಬಂದು ಡಿಕ್ಕಿ ಪಡಿಸಿರುತ್ತಾರೆ. ಅಪಘಾತ ಆದ ನಂತರ ನನಗೆ ಪ್ರಜ್ಞೆ ತಪ್ಪಿದ್ದು, ಪ್ರಭುರಾವ ಇತನು ಬೈಕನಿಂದ ಬಿದ್ದನೋ ಇಲ್ಲಾ ಗೊತ್ತಿಲ್ಲಾ. ನನ್ನ ಬೈಕಗೆ ವಿಮೆ ಇಲ್ಲಾ, ಚಲಾಯಿಸಲು ಚಾಲನಾ ಪತ್ರ ಇಲ್ಲಾ, ನಾನೇ ಬಿದ್ದು ಗಾಯ ಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಬಿದ್ದು ಗಾಯ ಪಡಿಸಿಕೊಂಡು ನನ್ನ ಬೈಕಗೆ ವಿಮೆ ಇಲ್ಲದ ಕಾರಣ ಪ್ರಭುರಾವ ಇತರ ಬೈಕ ಬಂದು ಡಿಕ್ಕಿ ಪಡಿಸಿತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ನಾನು ಹೇಳಿದಂತೆ ಯಾವುದೇ ಅಪಘಾತ ಆಗಿಲ್ಲಾ ಎಂದರೆ ಸರಿಯಲ್ಲ .

ನನ್ನನ್ನು ಇನ್ನೊಬ್ಬ ತಮ್ಮ ಮಾಣಿಕರಾವ ಕುರಾಳ ಆಸ್ಪತ್ರೆಗೆ ಕರೆದುಕೊಂಡು ಹೋದರು. ಕುರಾಳ ಆಸ್ಪತ್ರೆಯಲ್ಲಿ 11 ದಿನ ಒಳರೋಗಿ ಯಾಗಿ ಇದ್ದೇನು. ಅಪಘಾತದಿಂದ ನನಗೆ ಎಡಗೈ ಮೂಳೆ ಮುರಿತ ಆಗಿರುತ್ತದೆ. ನನಗೆ ಈಗ ಮೂಳೆ ಮುರಿತ ಜೋಡಣೆ ಆತಿ ಯಾವುದೇ ತೊಂದರೆ ಇಲ್ಲಾ ಎಂದರೆ ಸರಿಯಲ್ಲ . ಬಲಗಡೆ ನನ್ನ ಕುತ್ತಿಗೆ ಬಳಿ ಮೂಳೆ ಮುರಿತ ಆಗಿದೆ. ಈಗ ಮೂಳೆ ಮುರಿತ ಜೋಡಣೆ ಆಗಿ ಎಲ್ಲಾ ಕೆಲಸ

**ಎಮ್.ವಿ.ಸಿ. ನಂಃ 1452/2024**
**ಪಿ.ಡಬ್ಲ್ಯೂಃ1, ಮೈಲಾರಿ**

ಮಾಡುತ್ತೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಲು ವೈದ್ಯರ ಜೋತೆ ಸೇರಿ ಸುಳ್ಳು ಅಂಗ ನ್ಯೂನ್ಯತೆ ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ನಾನೇ ಬಿದ್ದು ಗಾಯ ಪಡಿಸಿಕೊಂಡಿದ್ದು, ಸುಳ್ಳು ದೂರು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

**ಮರು ವಿಚಾರಣೆ : ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**